KATK900001092024

# 5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತಿಪಟೂರು

## ಎಸ್.ಸಿ.ಸಂಖ್ಯೆ: 10007/2024

**ಪ್ರಮಾಣೀಕರಿಸಿದ ದಿನಾಂಕ: 04.12.2025.**

**ಚಾ.ಸಾ-3**

**ಪ್ರಾಸಾ-3**

| | |
|---|---|
| ಹೆಸರು | ರಮೇಶ್ |
| ತಂದೆ ಹೆಸರು | ನಿಂಗಪ್ಪ |
| ವಯಸ್ಸು | 40 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಡಿ-ಪಾಳ್ಯ,ದಂಡಿನಶಿವರ |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ದಿ: 08.10.2023 ರಂದು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಹುಟ್ಟಿದಾಗಿನಿಂದ ಡಿ-ಪಾಳ್ಯದಲ್ಲಿ ವಾಸವಿರುತ್ತೇನೆ. ನಾನು SSLC ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ದಿ: 07.10.2023 ರಂದು ನಾನು

ಶಿವಮ್ಮನವರ ಅಂಗಡಿಯ ಬಳಿಯಲ್ಲಿ ಬಾಳೇಗೊನೆ ತೆಗೆದುಕೊಂಡು ಸದರಿ ಬಾಳೇಗೊನೆಯನ್ನು ಶಿವಮ್ಮನವರ ಅಂಗಡಿಯಲ್ಲಿ ಕೊಟ್ಟು ಕೆಮಿಕಲ್ ಸ್ಪ್ರೇ ಮಾಡಲು ತಿಳಿಸಿರುತ್ತೇನೆ. ಸದರಿ ಶಿವಮ್ಮ ಹಾಗೂ ಪ್ರಭಯ್ಯನವರ ಅಂಗಡಿಯ ಬಳಿ ನಾನು 12.30 ಗಂಟೆಗೆ ಇದ್ದಾಗ, ಅಲ್ಲಿಗೆ ನಂದೀಶ ಈತನು ಬಂದಿದ್ದು, ನಂದೀಶನು ತನ್ನ ದ್ವಿಚಕ್ರ ವಾಹನವನ್ನು ಅಂಗಡಿಯ ಬಳಿ ನಿಲ್ಲಿಸಿದ್ದು, ಸದರಿ ಬೈಕಿನಲ್ಲಿ ಕುಡುಗೋಲು ಇತ್ತು. ಸದರಿ ಸ್ಥಳದಲ್ಲಿ ನಾನು ಕುಳಿತಿದ್ದು, ನಂದೀಶನು ಶಿವಮ್ಮನವರ ಬಳಿ ಗುಟ್ಕ ಕೇಳಿರುತ್ತಾನೆ. ನಂತರ ನೋಡಲಾಗಿ ಶಿವಮ್ಮನವರ ಸ್ಟೂಲಿನಿಂದ ಕೆಳಗೆ ಬಿದ್ದಿರುತ್ತಾರೆ. ನಂದೀಶನ ಕೈಯಲ್ಲಿ ಕುಡುಗೋಲು ಇರುತ್ತದೆ. ಸದರಿ ಕುಡುಗೋಲಿನಿಂದ ನಂದೀಶನು ಶಿವಮ್ಮನವರ ಎಡ ಕೆನ್ನೆಯ ಬಳಿ ಹೊಡೆದಿರುತ್ತಾರೆ. ಸದರಿ ಟೇಬಲ್ ನ ಬಳಿ ಒಂದು ಚೂರಿ ಇದ್ದು, ಸದರಿ ಚೂರಿಯನ್ನು ತೆಗೆದುಕೊಂಡು ಶಿವಮ್ಮನವರ ಗಂಟಲಿಗೆ ಹಾಗೂ ಎದೆಯ ಭಾಗಕ್ಕೆ ಚುಚ್ಚುತ್ತಾನೆ. ನಾನು ಚಂದ್ರಶೇಕರ, ವೆಂಕಟಪ್ಪ, ಸಿದ್ದೇಶ ಹಾಗೂ ಶಿವಕುಮಾರ್ ರವರು ಸೇರಿ ಬಿಡಿಸಲು ಹೋದಾಗ ನಂದೀಶ ಈತನು ಕುಡುಗೋಲನ್ನು ತೋರಿಸಿರುತ್ತಾನೆ. ನಾವು ಭಯಗೊಂಡು ಹಿಂದೆ ಸರಿದಿರುತ್ತೇವೆ. ಸದರಿ ಕುಡುಗೋಲನ್ನು ಅಲ್ಲೇ ಪಕ್ಕದಲ್ಲಿ ಇದ್ದ ಪೆಟ್ಟಿಗೆಯ ಅಂಗಡಿಯ ಕೆಳಗೆ ಹಾಕಿ, ಚೂರಿಯನ್ನು ತೆಗೆದುಕೊಂಡು ಠಾಣೆಗೆ ಹೋಗಿ ಸರಂಡರ್ ಆಗುತ್ತೇನೆ ಎಂದು ದ್ವಿಚಕ್ರವಾಹನದಲ್ಲಿ ಠಾಣೆಗೆ ಹೋಗಿರುತ್ತಾನೆ. ಸದರಿ ಶಿವಮ್ಮನವರ ಮೂರು ಅಂಗಡಿ ಇದ್ದು, ಒಂದು ಗ್ರಾಮ-1 ಹಾಗೂ ವೆಂಕಟಪ್ಪನಿಗೆ ಒಂದು ಅಂಗಡಿಯನ್ನು ನೀಡಿದ್ದು, ಇನ್ನೊಂದು ಅಂಗಡಿಯಲ್ಲಿ ಶಿವಮ್ಮನವರು ಟೀ ಅಂಗಡಿಯನ್ನು ನಡೆಸುತ್ತಿದ್ದರು. ಸದರಿ ನಂದೀಶರವರು ಸಹಃ ಅಲ್ಲೇ ಪಕ್ಕದಲ್ಲಿ ಟೀ ಅಂಗಡಿ ಹಾಗೂ ಚಿಲ್ಲರೆ ಅಂಗಡಿ

ಇಟ್ಟುಕೊಂಡಿದ್ದು, ಅದು ಲಾಸ್ ಆದ ಕಾರಣ ಅದನ್ನು ಮುಚ್ಚಿರುತ್ತಾನೆ. ಸದರಿ ನಂದೀಶ ಈತನು ಯಾವ ಕಾರಣಕ್ಕಾಗಿ ಕೊಲೆ ಮಾಡಿರುತ್ತಾನೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ನಂದೀಶನ ಅಂಗಡಿ ಲಾಸ್ ಅಲ್ಲಿ ಇದ್ದು, ಶಿವಮ್ಮನವರ ಅಂಗಡಿ ಚೆನ್ನಾಗಿ ನಡೆಯುತ್ತಿತ್ತು, ಯಾವ ಕಾರಣಕ್ಕಾಗಿ ಮಾಡಿರುತ್ತಾನೆಂದು ನನಗೆ ತಿಳಿದಿರುವುದಿಲ್ಲ.

ಸದರಿ ಬೈಕ್, ಕುಡುಗೋಲು ಹಾಗೂ ಚೂರಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಚೂರಿ, ಕುಡುಗೋಲು ಹಾಗೂ ಬೈಕನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆಮಾಲು-7 ರಿಂದ 9 ಎಂದು ಗುರುತಿಸಲಾಗಿರುತ್ತದೆ. ಸದರಿ ನಂದೀಶ ಈತನನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ವಿ.ಸಿ ಮುಖಾಂತರ ಹಾಜರಿರುವ ನಂದೀಶ ಈತನನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಸದರಿ ವಿಚಾರದ ಬಗ್ಗೆ ನಾನು ತುರುವೇಕೆರೆ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ಹೇಳಿಕೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು **ನಿ.ಪಿ-10** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-10(ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ.ಎಸ್.ವಿ.ಎಸ್ ವಕೀಲರಿಂದಃ**

ನಾನು 40 ವರ್ಷದಿಂದ ಊರಿನಲ್ಲಿ ವಾಸವಿದ್ದು, ನನಗೆ ಶಿವಮ್ಮ ಹಾಗೂ ಅವರ ಮನೆಯವರ ಪರಿಚಯವಿರುತ್ತದೆ ಎಂದರೆ ಸರಿ. ನನಗೆ ಶಿವಮ್ಮನವರ ಕುಟುಂಬದ ವಿಷಯ ತಿಳಿದಿರುವುದಿಲ್ಲ. ಸದರಿ ಶಿವಮ್ಮನವರು 20 ವರ್ಷದ ಹಿಂದೆ ಸಾರಾಯಿ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿ. ಸದರಿ ಶಿವಮ್ಮನವರ ಮಧ್ಯದ ಲೈಸೆನ್ಸ್ ರದ್ದಾದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ಶಿವಮ್ಮನವರು ಮಧ್ಯ ಮಾರಾಟ ಮಾಡುತ್ತಿದ್ದು, ಅವರಿಗೆ ವಿರೋಧ ಹಾಗೂ ದ್ವೇಷ ಮಾಡುವವರು ಊರಿನಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಸದರಿ ಶಿವಮ್ಮನವರ ಅಂಗಡಿಯ ಉತ್ತರ ಭಾಗದಲ್ಲಿ ಕುಳಿತಿದ್ದೆನು. ನಾನು ಕುಳಿತಿದ್ದ ಜಾಗಕ್ಕೂ ಶಿವಮ್ಮನವರು ಕುಳಿತಿದ್ದ ಜಾಗಕ್ಕೂ ಸುಮಾರು 20 ಅಡಿ ಅಂತರವಿತ್ತು. ನಾನು ಶಿವಮ್ಮನವರ ಕಡೆಗೆ ಬೆನ್ನು ಮಾಡಿ ಕಲ್ಲಿನ ಟೇಬಲ್ ಮೇಲೆ ಕುಳಿತಿದ್ದೆನು. ನಾನು ಕುಳಿತಿದ್ದ ಸ್ಥಳಕ್ಕೂ ನಂದೀಶರವರು ಬೈಕ್ ನಿಲ್ಲಿಸಿದ ಸ್ಥಳಕ್ಕೂ ಸುಮಾರು 10 ಅಡಿ ಅಂತರವಿತ್ತು. ಸದರಿ ಶಿವಮ್ಮನವರಿಗೆ ಕುಡುಗೋಲಿನಿಂದ ಏಟು ಬಿದ್ದಾಗ ಅವರು ಕೆಳಗೆ ಬಿದ್ದಿರುತ್ತಾರೆ ಆದರೆ ಕಿರುಚಿರುವುದಿಲ್ಲ. ಸದರಿ ಚಾಕುವಿನಿಂದ ಚುಚ್ಚಿದಾಗ ಶಿವಮ್ಮನವರ ಕೂತಿದ್ದ ಜಾಗದಿಂದ ಹಿಂದಕ್ಕೆ ಅಂಗಾತವಾಗಿ ಬಿದ್ದಿದ್ದರು. ಸದರಿ ಶಿವಮ್ಮನವರು ಅಂಗಾತವಾಗಿ ಬಿದ್ದಾಗ ಅವರ ತಲೆಗೆ ಏಟಾದ ಬಗ್ಗೆ ಪರಿಶೀಲಿಸಿರುವುದಿಲ್ಲ. ಸದರಿ ಚಾಕುವಿನಿಂದ ಚುಚ್ಚಿದಾಗ ರಕ್ತ ಹೊರಗೆ ಚಿಮ್ಮಿರುವುದನ್ನು ನಾನು ನೋಡಿರುವುದಿಲ್ಲ. ಸಾಮಾನ್ಯವಾಗಿ ಎದೆಯ ಭಾಗಕ್ಕೆ ಚಾಕುವನ್ನು ಚುಚ್ಚಿದರೆ ರಕ್ತ ಚಿಮ್ಮುತ್ತದೆ ಎಂದರೆ ಸರಿ. ನಾನು ಚುಚ್ಚುವುದನ್ನು ಮಾತ್ರ ನೋಡಿರುತ್ತೇನೆ, ರಕ್ತ ಚಿಮ್ಮುವುದನ್ನು ನೋಡಿರುವುದಿಲ್ಲ. ಶಿವಮ್ಮನವರಿಗೆ ನಾಲ್ಕೈದು

ಕಡೆ ಚಾಕುವಿನಿಂದ ಚುಚ್ಚಿರುತ್ತಾರೆ. ಸದರಿ ಶಿವಮ್ಮನವರ ಅಂಗಡಿಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಸದರಿ ಶಿವಮ್ಮನವರು ನಡೆಸುತ್ತಿದ್ದ ಅಂಗಡಿಯಲ್ಲಿ ನಾಮ ಫಲಕ ಇದ್ದ ಬಗ್ಗೆ ಗಮನಿಸಿರುವುದಿಲ್ಲ.

ಅಂಗಡಿಯನ್ನು ನಡೆಸಬೇಕಾದರೆ ಲೈಸೆನ್ಸ್ ಪಡೆಯಬೇಕೆಂದರೆ ಸರಿ. ಸದರಿ ಶಿವಮ್ಮನವರು ಅಂಗಡಿಯನ್ನು ನಡೆಸಲು ಲೈಸೆನ್ಸ್ ಪಡೆದುಕೊಂಡ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ಶಿವಮ್ಮನವರ ಗಂಡ ಸ್ಥಳದಲ್ಲಿ ಹಾಜರಿರಲಿಲ್ಲ, ಅವರು ಎಲ್ಲಿ ಹೋಗಿದ್ದರು ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಶಿವಮ್ಮನವರ ಗಂಡ ಅಲ್ಲಿಗೆ ಬಂದ ಬಗ್ಗೆ ನನಗೆ ತಿಳಿದಿರುವುದಿಲ್ಲ ಹಾಗೂ ನಾನು ಅವರನ್ನು ನೋಡಿರುವುದಿಲ್ಲ. ನಾನು, ಚಂದ್ರಶೇಕರ, ವೆಂಕಟಪ್ಪ, ಸಿದ್ದೇಶ ಹಾಗೂ ಶಿವಕುಮಾರ್ ಎಲ್ಲಾರು ವಿಶ್ವಾಸದಲ್ಲಿರುತ್ತೇವೆ ಎಂದರೆ ಸರಿ. ಸದರಿ ಶಿವಮ್ಮನವರಿಗೆ ಮೂರು ಜನ ಮಕ್ಕಳಿರುತ್ತಾರೆ. ಒಬ್ಬರ ಹೆಸರು ರಾಜು ಮತ್ತೊಬ್ಬರ ಹೆಸರು ಮಂಗಳಮ್ಮ ಇರುತ್ತದೆ ಮತ್ತೊಬ್ಬರ ಹೆಸರು ತಿಳಿದಿರುವುದಿಲ್ಲ. ಸದರಿ ರಾಜುರವರು ಏನು ಕೆಲಸ ಮಾಡುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ ಆದರೆ ಅವರು ಬೆಂಗಳೂರಿನಲ್ಲಿ ವಾಸಿಸುತ್ತಾರೆ. ರಾಜುರವರಿಗೆ ಮದುವೆಯಾಗಿ ಮಕ್ಕಳಿರುತ್ತಾರೆ. ಸದರಿ ರಾಜುರವರು ಬೆಂಗಳೂರಿನಲ್ಲಿ 20 ವರ್ಷದಿಂದ ವಾಸಿಸುತ್ತಿದ್ದಾರೆ. ಸದರಿ ರಾಜುರವರು ಸಾಮಾನ್ಯವಾಗಿ ಊರಿಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ರಾಜುರವರು ವರ್ಷಕ್ಕೆ ಎರಡು ಮೂರು ಬಾರಿ ಬರುತ್ತಿದ್ದರು, ನಿಖರವಾಗಿ ನನಗೆ ತಿಳಿದಿರುವುದಿಲ್ಲ. ನಾನು ಸದರಿ ಶಿವಮ್ಮನವರ ಅಂಗಡಿಯ ಬಳಿ 12.20 ಗಂಟೆಗೆ ಹೋಗಿರುತ್ತೇನೆ. ನನಗೆ ವಾಚ್ ಧರಿಸುವ ಅಭ್ಯಾಸ ಇರುವುದಿಲ್ಲ.

ನಾನು ಸದರಿ ಸ್ಥಳಕ್ಕೆ 5 ನಿಮಿಷದ ಹಿಂದೆ ಹೋಗಿರುತ್ತೇನೆ. ಸದರಿ ಚಂದ್ರಶೇಕರ, ಶಿವಕುಮಾರ್, ವೆಂಕಟಪ್ಪ ಹಾಗೂ ಸಿದ್ದೇಶ ರವರು ಸದರಿ ಶಿವಮ್ಮನವರ ಅಂಗಡಿಯ ಬಳಿ ಎಷ್ಟು ಗಂಟೆಗೆ ಬಂದಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸದರಿ ಶಿವಕುಮಾರ್ ಮತ್ತು ಸಿದ್ದೇಶರವರು ಬಾಳೆಗೋನೆಗೆ ಔಷದಿ ಹೊಡೆಸಲು ಕುಳಿತಿದ್ದರು. ಸದರಿ ಅಂಗಡಿಯ ಮುಂದೆ ಬಾಳೆಗೊನೆ ಇಡಲು ಜಾಗವಿರುತ್ತದೆ, ಅಲ್ಲಿ ನೋಡಿದಾಗ ನಾಲ್ಕೈದು ಗೊನೆಗಳು ಇದ್ದವು, ಅದು ಯಾರಿಗೆ ಸೇರಿದ ಅಂಗಡಿ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಶಿವಮ್ಮನವರು ತನ್ನ ಗಂಡ ಔಷದಿಯನ್ನು ತರಲು ಮಾರುಕಟ್ಟೆಗೆ ಹೋಗಿರುತ್ತಾರೆಂದು 12.20 ಗಂಟೆಗೆ ತಿಳಿಸಿರುತ್ತಾರೆ. ಸದರಿ ಬೇಕರಿಯ ಹೆಸರು ವೆಂಕಟೇಶ್ವರ ಬೇಕರಿ ಎಂದು ಇತ್ತು ಅದನ್ನು ನಾನು ನೋಡಿರುತ್ತೇನೆ. ಸದರಿ ಬೋರ್ಡ್‌ನ್ನು ಯಾವ ಬಣ್ಣದಲ್ಲಿ ಬರೆಸಿರುತ್ತಾರೆಂದು ನಾನು ನೋಡಿರುವುದಿಲ್ಲ. ಸದರಿ ಬೇಕರಿಯ ಬಳಿ ತಿಂಡಿ ಕೊಳ್ಳುವವರ ಹಾಗೂ ತಿನ್ನುವವರರು ಇರುತ್ತಾರೆ ಎಂದರೆ ಸರಿ. ಅಂದು ಸದರಿ ಬೇಕರಿಯ ಬಳಿ ಯಾವುದೇ ಜನರು ಇರುವುದಿಲ್ಲ.

ಸದರಿ ಗ್ರಾಮ-1 ಕಚೇರಿಯಲ್ಲಿ ಸಾಕಷ್ಟು ಜನರು ಬಂದು ಹೋಗುತ್ತಾರೆ ಎಂದರೆ ಸರಿ. ಅಂದು ಜನರು ಇರಲಿಲ್ಲ. ಸದರಿ ಶಿವಮ್ಮನವರ ಅಂಗಡಿಗೂ ಗ್ರಾಮ-1 ಕ್ಕೂ ಸುಮಾರು 5 ಅಡಿ ಅಂತರವಿರುತ್ತದೆ. ನಾನು ಕುಳಿತಿದ್ದ ಅಂಗಡಿ ಬಳಿಯಿಂದ ಗ್ರಾಮ-1 ಕಚೇರಿ ಹಾಗೂ ಬೇಕರಿ ಕಾಣಿಸುತ್ತಿತ್ತು ಎಂದರೆ ಸರಿ. ಸದರಿ ಗ್ರಾಮ-1 ಕಚೇರಿಯಲ್ಲಿ ನಾನು ಅಲ್ಲಿ ಕುಳಿತ್ತಿದ್ದಾಗ ಒಬ್ಬರು ಇಬ್ಬರು ಇದ್ದರು ಅವರು ಯಾರು ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಊರಿನಲ್ಲಿ 80 ಮನೆಗಳು ಇರುತ್ತವೆ. ಸದರಿ

ನಂದೀಶರವರು ಅಂಗಡಿ ಇಟ್ಟಿದ್ದ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ. ಸದರಿ ನಂದೀಶರವರ ಅಂಗಡಿ ಯಾರಿಗೆ ಸೇರಿದ್ದು ಎಂದು ನನಗೆ ತಿಳಿದಿರುವುದಿಲ್ಲ. ಸದರಿ ನಂದೀಶರವರ ಅಂಗಡಿ ಆರು ತಿಂಗಳಿನಿಂದ ಮುಚ್ಚಿರುತ್ತಾರೆ.

ಘಟನೆಯ ದಿನದಂದು ನಂದೀಶರವರು ಯಾವ ಬಣ್ಣದ ಬಟ್ಟೆ ಹಾಕಿದ್ದರು ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಶಿವಮ್ಮನವರು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಬೈಕ್ ನಂದೀಶ ರವರದ್ದು ಇರುತ್ತದೆ. ಸದರಿ ಬೈಕ್ ಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಸದರಿ ಮುದ್ದೆಮಾಲು–7 ಮತ್ತು 8 ರಕ್ತವಾಗಿತ್ತು ಎಂದರೆ ಸರಿ. ಸದರಿ ಚಾಕುವಿಗೆ ರಕ್ತವಾಗಿರುತ್ತದೆ, ಎಷ್ಟು ಆಗಿರುತ್ತದೆ ಎಂದು ನನಗೆ ನಿಖರವಾಗಿ ತಿಳಿದಿರುವುದಿಲ್ಲ. ಸದರಿ ಅಂಗಡಿಯಲ್ಲಿ ಗ್ಲಾಸ್ ನ ಶೋಕೇಸ್ ಟೇಬಲ್ ಇರುತ್ತದೆ. ಶೋಕೇಸ್ ಮತ್ತು ಟೇಬಲ್ ಗೆ ವ್ಯತ್ಯಾಸವಿರುತ್ತದೆ ಎಂದರೆ ಸರಿ. ಸದರಿ ಶೋ ಕೇಸ್ ಟೇಬಲ್ ಅಲ್ಲಿ ಬಿಸ್ಕೇಟ್ ಮತ್ತು ಚಾಕೋಲೇಟ್ ಇತ್ತು. ಸದರಿ ಶೋಕೇಸ್ ಅಲ್ಲಿ 4–5 ಬಾಕ್ಸ್ ಇತ್ತು. ಸದರಿ ಟೇಬಲ್ ಅಲ್ಲಿ ಒಟ್ಟು 4–5 ಬಾಕ್ಸ್ ಇತ್ತು. ಸದರಿ ಶೋಕೇಸ್ ಅಲ್ಲಿ ಇದ್ದ ಬಾಕ್ಸ್ ಗಳು ಚೌಕಾಕಾರದಲ್ಲಿ ಇದ್ದವು.

ಸದರಿ ಚಾಕುವನ್ನು ನಂದೀಶರವರು ತೆಗೆದುಕೊಂಡಿರುವುದನ್ನು ನೋಡಿರುವುದಿಲ್ಲ. ಸದರಿ ಚಾಕುವಿನಿಂದ ಚುಚ್ಚುವ ಕಾಲಕ್ಕೆ ನಾವು ಅಂಗಡಿಯ ಬಳಿ ಇದ್ದವರು ಬಿಡಿಸಲು ಹೋಗಿರುತ್ತೇವೆ. ಸದರಿ ಚಾಕು ಹಾಗೂ ಕುಡುಗೋಲನ್ನು ಎರಡು ಕೈಗಳಲ್ಲಿ

ಹಿಡಿದುಕೊಂಡಿದ್ದನು. ಸದರಿ ನಂದೀಶರವರನ್ನು ಹಿಂದಿನಿಂದ ಹೋಗಿ ಹಿಡಿದುಕೊಂಡು ಬಿಡಿಸಲು ಪ್ರಯತ್ನಿಸಿರುವುದಿಲ್ಲ. ಸದರಿ ಕುಡುಗೋಲನ್ನು ನೋಡಿದರೆ ಗುರುತಿಸುವಂತಹ ಗುರುತು ಇತ್ತು. ಸದರಿ ಕುಡುಗೋಲಿನಲ್ಲಿ ರಬ್ಬರ್ ಕಟ್ಟಿತ್ತು. ಸದರಿ ಹಳ್ಳಿಗಳಲ್ಲಿ ಕಾಯಿ ಕೀಳಲು ಸಾಮಾನ್ಯವಾಗಿ ಕುಡ್ಲಿಗೆ ರಬ್ಬರ್ ಕಟ್ಟಿರುತ್ತಾರೆ ಎಂದರೆ ಸರಿ. ಸದರಿ ಕುಡುಗೋಲನ್ನು ಪೆಟ್ಟಿಗೆ ಅಂಗಡಿಯ ಕೆಳಗೆ ಎಸೆದಿರುತ್ತಾರೆ. ಸದರಿ ಪೆಟ್ಟಿಗೆ ಅಂಗಡಿಗೆ ಯಾವುದೇ ಬಣ್ಣ ಹೊಡೆದಿರುವುದಿಲ್ಲ ಹಾಗೂ ಅದರ ಅಳತೆಯ ಬಗ್ಗೆ ತಿಳಿದಿರುವುದಿಲ್ಲ. ಸದರಿ ಪೆಟ್ಟಿಗೆ ಅಂಗಡಿಯು ಶ್ರೀನಿವಾಸರವರದ್ದು ಇರುತ್ತದೆ. ಸದರಿ ನಮ್ಮ ಊರು ಗ್ರಾಮ ಪಂಚಾಯತಿಗೆ ಸೇರುತ್ತದೆ. ಸದರಿ ಶ್ರೀನಿವಾಸರವರು ಪೆಟ್ಟಿಗೆ ಅಂಗಡಿಯನ್ನು ಇಡಲು ಲೈಸೆನ್ಸ್ ಪಡೆದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ಪೆಟ್ಟಿಗೆಯ ಅಂಗಡಿಯ ಕೆಳಗೆ ಮಣ್ಣಿನ ನೆಲ ಇರುತ್ತದೆ. ನಾನು ಸದರಿ ಕುಡುಗೋಲನ್ನು ತೆಗೆಯುವಾಗ ಎರಡು ಮೂರು ಅಡಿ ಅಂತರದಿಂದ ನೋಡಿರುತ್ತೇನೆ. ಸದರಿ ಕುಡುಗೋಲನ್ನು ನಂದೀಶರವರು ನಿಂತುಕೊಂಡು ಎಸೆದಿರುತ್ತಾರೆ. ಸದರಿ ಕುಡುಗೋಲನ್ನು ಎಸೆದ ಸ್ಥಳದಲ್ಲಿ ರಕ್ತದ ಗುರುತು ಅಥವಾ ಕುಡುಗೋಲು ಬಿದ್ದಿರುವ ಗುರುತನ್ನು ನಾನು ಗಮನಿಸಿರುವುದಿಲ್ಲ. ಸದರಿ ಕುಡುಗೋಲನ್ನು ನಿಂತು ಎಸೆದಾಗ ಮಣ್ಣಿನ ನೆಲದಲ್ಲಿ ಗುರುತು ಕಾಣಿಸಿಕೊಳ್ಳುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಆರೋಪಿತನಿಗೆ ಹೆಂಡತಿ ಹಾಗೂ ಇಬ್ಬರು ಗಂಡು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ಹೆಣ್ಣು ಮಕ್ಕಳು ವಯಸ್ಕರಿದ್ದು, ಒಬ್ಬರಿಗೆ ಆರು ತಿಂಗಳ ಹಿಂದೆ ಮದುವೆಯಾಗಿರುತ್ತದೆ.

ಸದರಿ ನ್ಯಾಯಾಲಯಕ್ಕೆ ಹೇಳಿಕೆ ನೀಡಲು ಬರಬೇಕೆಂದು ಪೋಲಿಸರು ನೋಟಿಸ್ ಅನ್ನು ನೀಡಿರುತ್ತಾರೆ. ಸದರಿ ನೋಟಿಸ್ ನ ಪ್ರತಿ ನನ್ನ ಬಳಿ ಇರುವುದಿಲ್ಲ. ಸದರಿ ನೋಟಿಸ್ ಅನ್ನು ಸಹಿ ಪಡೆದು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಪೋಲಿಸರು ಹೇಳಿಕೆ ನೀಡುವ ಎರಡು ದಿನದ ಹಿಂದೆ ನೀಡಿರುತ್ತಾರೆ. ನಮ್ಮ ಮನೆಯಿಂದ ಶಿವಮ್ಮನವರ ಅಂಗಡಿ ಸುಮಾರು 100 ಮೀಟರ್ ಅಂತರದಲ್ಲಿರುತ್ತದೆ. ನಮ್ಮ ಮನೆಯಲ್ಲಿ ನಾನು ನನ್ನ ಹೆಂಡತಿ ಮಗ ವಾಸಿಸುತ್ತೇವೆ. ಸದರಿ ಶಿವಮ್ಮನವರ ಅಕ್ಕಪಕ್ಕದಲ್ಲಿ ನಂದೀಶ, ಶ್ರೀನಿವಾಸ, ಶಿವಕುಮಾರ್ ರವರ ಮನೆಗಳು ಮಾತ್ರ ಇರುತ್ತದೆ ಸದರಿ ಶ್ರೀನಿವಾಸರವರ ಮನೆಯಲ್ಲಿ ಅವರ ತಾಯಿ ಹಾಗೂ ಶ್ರೀನಿವಾಸರವರು ಮಾತ್ರ ವಾಸವಿರುತ್ತಾರೆ. ಶ್ರೀನಿವಾಸರವರ ಮನೆಯಿಂದ ಶಿವಮ್ಮನವರ ಅಂಗಡಿ ಸುಮಾರು 20 ಮೀಟರ್ ಅಂತರದಲ್ಲಿರುತ್ತದೆ. ಸದರಿ ಘಟನೆ ನಡೆದಾಗ ಅಕ್ಕಪಕ್ಕದ ಮನೆಯವರು ಬಂದಿರುವುದನ್ನು ನಾನು ಗಮನಿಸಿರುವುದಿಲ್ಲ. ಸದರಿ ನಂದೀಶರವರು ಬಿಸಿನೆಸ್ ಅಲ್ಲಿ ಲಾಸ್ ಆಗಿ ಬೇಜಾರಿನಲ್ಲಿ ಇರುತ್ತೀನಿ ಎಂದು ನನ್ನ ಬಳಿ ಹೇಳಿಕೊಂಡಿರುವುದಿಲ್ಲ. ಸದರಿ ಘಟನೆ ನಡೆದ ನಂತರ ಅಲ್ಲಿ ಎಲ್ಲಾ ಚಟುವಟಿಕೆಗಳಿಗೆ ಸುಮಾರು ಅರ್ಧ ಗಂಟೆಯಾಗಿರುತ್ತದೆ.

ನನ್ನದು ಮಾಮುಲೀ ಕೀ–ಪ್ಯಾಡ್ ಮೊಬೈಲ್ ಇರುತ್ತದೆ. ಸದರಿ ವೆಂಕಟಪ್ಪನವರನ್ನು ಹೊರತು ಪಡಿಸಿ ಉಳಿದವರ ಬಳಿ ಮೊಬೈಲ್ ಫೋನ್ ಇರುತ್ತದೆ. ನಾನು ನನ್ನ ಬಳಿ ಇದ್ದ ಮೊಬೈಲ್ ನಿಂದ ಪೋಲಿಸರಿಗೆ ತಿಳಿಸಲು ಪ್ರಯತ್ನಿಸಿರುವುದಿಲ್ಲ. ಪೋಲಿಸ್ ಇಲಾಖೆಯಲ್ಲಿ ಹೊಯ್ಸಳ ವ್ಯವಸ್ಥೆ ಇರುತ್ತದೆ ಎಂದರೆ ಸರಿ. ಸದರಿ ಹೊಯ್ಸಳ

ವ್ಯವಸ್ಥೆಯು ಘಟನಾ ಸ್ಥಳಕ್ಕೆ ತಕ್ಷಣ ತಲುಪಲು ಮಾಡಿರುವ ವ್ಯವಸ್ಥೆ ಎಂದರೆ ಸರಿ. ಸದರಿ ಘಟನೆಯ ಬಗ್ಗೆ ಪೋಲಿಸರಿಗೆ ತಿಳಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾವುಗಳು ಪೋಲಿಸರು ವಿಷಯ ತಿಳಿಸಲು ಪರಸ್ಪರ ಮಾತನಾಡಿಕೊಂಡಿರುವುದಿಲ್ಲ ಎಂದರೆ ಸರಿ. ನಾನು ಹಾಗೂ ಇತರರು ಸದರಿ ಸ್ಥಳದಲ್ಲಿ ಹಾಜರಿಲ್ಲದಿದ್ದರೂ ಸಹಃ ಹಾಗೂ ನಾನು ಘಟನೆಯನ್ನು ಕಣ್ಣಾರೆಯನ್ನು ನೋಡಿಲ್ಲದಿದ್ದರು ಸಹಃ ಪೊಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಅವರ ಹೇಳಿದ ಹಾಗೇ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರುವಿಚಾರಣೆ ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತಿಪಟೂರು**